ಹಸಿ ಕಸ– ಒಣ ಕಸ ಪ್ರತ್ಯೇಕ ಟೆಂಡರ್ ಕರೆದರೆ ಪಾಲಿಕೆಗೆ ನಷ್ಟ • ಅಧಿಕಾರಿಗಳ ಅಂದಾಜು

# ಪಾಲಿಕೆಗೆ ₹1,121ಕೋಟಿ ಹೆಚ್ಚುವರಿ ಹೊರೆ?

• ಪ್ರವೀಣ್ ಕುಮಾರ್ ಪಿ.ವಿ.

**ಬೆಂಗಳೂರು:** ಪ್ರತಿ ವಾರ್ಡ್‌ನಲ್ಲಿ ಮನೆಮನೆಗಳಿಂದ ಹಸಿ ಕಸ ಮತ್ತು ಒಣ ಕಸ ಸಂಗ್ರಹಿಸುವುದಕ್ಕೆ ಒಟ್ಟಿಗೆ ಟೆಂಡರ್ ಕರೆದರೆ ಪಾಲಿಕೆಗೆ ₹ 1,121 ಕೋಟಿ ಹೆಚ್ಚುವರಿ ಹೊರೆ ಉಂಟಾಗಲಿದೆ ಎಂದು ಪಾಲಿಕೆ ಅಧಿಕಾರಿಗಳು ಅಂದಾಜಿಸಿದ್ದಾರೆ.

ಮನೆ ಮನೆಗಳಿಂದ ಹಸಿ ಕಸ ಸಂಗ್ರಹಿಸುವುದಕ್ಕೆ ಪ್ರತ್ಯೇಕ ಗುತ್ತಿಗೆ ನೀಡುವ ಸಲುವಾಗಿ ಬಿಬಿಎಂಪಿ ಕರೆದಿರುವ ಟೆಂಡರ್ ಪ್ರಕ್ರಿಯೆ ಅಂತಿಮ ಹಂತ ತಲುಪಿದೆ. ಪ್ರತಿ ವಾರ್ಡ್‌ನಲ್ಲಿ ಹಸಿ ಕಸ ಮತ್ತು ಒಣ ಕಸ ಸಂಗ್ರಹಿಸುವ ಟೆಂಡರ್‌ಗಳನ್ನು ಒಬ್ಬರೇ ಗುತ್ತಿಗೆದಾರರಿಗೆ ವಹಿಸಬೇಕು ಎಂದು ಪಾಲಿಕೆ ಸದಸ್ಯರು ಒತ್ತಾಯಿಸುವ ಮೂಲಕ ಕೊನೆಯ ಹಂತದಲ್ಲಿ ತಗಾದೆ ತೆಗೆದಿದ್ದಾರೆ.

ಟೆಂಡರ್ ಪ್ರಕ್ರಿಯೆಯ ಉಸ್ತುವಾರಿ ಸಲುವಾಗಿ ಮೇಯರ್ ನೇತೃತ್ವದಲ್ಲಿ ರಚಿಸಿದ್ದ ಸಮಿತಿಯೂ ಹಸಿ ಕಸ ಸಂಗ್ರಹಕ್ಕೆ ಮಾತ್ರ ಟೆಂಡರ್ ಕರೆಯುವುದಕ್ಕೆ ವಿರೋಧ ವ್ಯಕ್ತಪಡಿಸಿದೆ.

ಒಂದು ವೇಳೆ ಪಾಲಿಕೆ ಸದಸ್ಯರು ಪಕ್ಷಭೇದ ಮರೆತು ಒತ್ತಾಯಿಸಿರುವಂತೆ ಹಸಿ ಕಸ, ಒಣ ಕಸ ಸಂಗ್ರಹ ಹಾಗೂ ಭಾರಿ ತ್ಯಾಜ್ಯ ಉತ್ಪಾದಕರಿಂದ ಕಸ ಸಂಗ್ರಹಿಸುವ ಹೊಣೆಯನ್ನೆಲ್ಲ ಒಬ್ಬರೇ ಗುತ್ತಿಗೆದಾರರಿಗೆ ವಹಿಸಿದರೆ ಪಾಲಿಕೆಗೆ ಎಷ್ಟು ಆರ್ಥಿಕ ಹೊರೆ ಉಂಟಾಗುತ್ತದೆ ಎಂಬುದನ್ನು ಪಾಲಿಕೆ ಘನತ್ಯಾಜ್ಯ ವಿಲೇವಾರಿ ವಿಭಾಗದ ಅಧಿಕಾರಿಗಳು ಅಂದಾಜು ಮಾಡಿದ್ದಾರೆ. ಅವರ ಪ್ರಕಾರ ಈ ನಿರ್ಧಾರವನ್ನು ಅನುಷ್ಠಾನಕ್ಕೆ ತರಬೇಕಾದರೆ ಪಾಲಿಕೆಗೆ ₹1,550.91 ಕೋಟಿ ಬೇಕಾಗುತ್ತದೆ.

ಈಗ ಟೆಂಡರ್ ಕರೆದಿರುವ ಪ್ರಕಾರ ಹಸಿ ಕಸವನ್ನು ಮಾತ್ರ ಸಂಗ್ರಹಿಸಿ ವಿಲೇವಾರಿ ಮಾಡುವುದಕ್ಕೆ ಪಾಲಿಕೆಗೆ ವರ್ಷಕ್ಕೆ ₹430 ಕೋಟಿ ಮಾತ್ರ ವೆಚ್ಚವಾಗಲಿದೆ. ಚಾಲ್ತಿಯಲ್ಲಿರುವ ವ್ಯವಸ್ಥೆಯ ಪ್ರಕಾರ, ಭಾರಿ ಪ್ರಮಾಣದಲ್ಲಿ ತ್ಯಾಜ್ಯ ನಿತ್ಯ ಉತ್ಪಾದಿಸುವವರು ಕಸವನ್ನು ಖಾಸಗಿ ಏಜೆನ್ಸಿಗೆ ನೀಡಬೇಕು ಹಾಗೂ ಅದರ ವಿಲೇವಾರಿಗೆ ತಗಲುವ ವೆಚ್ಚವನ್ನು ಅವರೇ ಭರಿಸಬೇಕು. ದಿನವೊಂದಕ್ಕೆ 10 ಕೆ.ಜಿ.ಗಿಂತ ಹೆಚ್ಚು ತ್ಯಾಜ್ಯ ಉತ್ಪಾದಿಸುವ ವ್ಯಾಪಾರಿಗಳು, ಹೋಟೆಲ್ ಮತ್ತು ರೆಸ್ಟೊರೆಂಟ್‌ಗಳು, 50ಕ್ಕಿಂತ ಹೆಚ್ಚು ಫ್ಲ್ಯಾಟ್‌ಗಳನ್ನು ಹೊಂದಿರುವ ಅಪಾರ್ಟ್‌ಮೆಂಟ್ ಸಮುಚ್ಚಯಗಳು ಈ ವರ್ಗದಲ್ಲಿ ಬರುತ್ತವೆ. ಇವುಗಳಿಂದ ನಿತ್ಯ 2 ಸಾವಿರ ಟನ್ ಕಸ ಉತ್ಪಾದನೆಯಾಗುತ್ತದೆ.

‘ಭಾರಿ ಪ್ರಮಾಣದ ತ್ಯಾಜ್ಯ ವಿಲೇವಾರಿ ಹೊಣೆಯನ್ನೂ ಪಾಲಿಕೆಯೇ ನಿಭಾಯಿಸುವುದಾದರೆ ನಿತ್ಯ 500 ಟನ್ ಕಸ ವಿಲೇವಾರಿ ಮಾಡಲು ನಾಲ್ಕು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಬೇಕಾಗುತ್ತದೆ. ಇದಕ್ಕೆ ₹ 500 ಕೋಟಿ ವೆಚ್ಚವಾಗುತ್ತದೆ. ಈ ಘಟಕಗಳ ಜಾಗ ಖರೀದಿಗೆ ₹ 50 ಕೋಟಿ ಬೇಕು. ಅವುಗಳ ಸುತ್ತಲಿನ ಮೂಲಸೌಕರ್ಯ ಅಭಿವೃದ್ಧಿಗೆ ₹ 100 ಕೋಟಿ ಬೇಕು. ಇವುಗಳಿಗೆ ಒಟ್ಟು ₹ 650 ಕೋಟಿಯನ್ನು ಏಕಕಾಲದಲ್ಲಿ ಹೂಡಿಕೆ ಮಾಡಬೇಕಾಗುತ್ತದೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ‘**ಪ್ರಜಾವಾಣಿ**’ಗೆ ತಿಳಿಸಿದರು.

‘ಭಾರಿ ಪ್ರಮಾಣದ ತ್ಯಾಜ್ಯ ಉತ್ಪಾದಕರಿಂದ ತ್ಯಾಜ್ಯ ಸಂಗ್ರಹವನ್ನು ನಾವೇ ಮಾಡುವುದಾದರೆ 2000 ಆಟೊ ಟಿಪ್ಪರ್‌ಗಳು ಹೆಚ್ಚುವರಿಯಾಗಿ ಬೇಕಾಗುತ್ತವೆ. ಅವರಿಗೆ ತಿಂಗಳಿಗೆ ₹ 11 ಕೋಟಿಯಂತೆ (ಟಿಪ್ಪರ್ ಒಂದಕ್ಕೆ ತಿಂಗಳಿಗೆ ₹ 55 ಸಾವಿರ) ವರ್ಷಕ್ಕೆ ₹132 ಕೋಟಿ ನೀಡಬೇಕು. ಈ ತ್ಯಾಜ್ಯಗಳನ್ನು ಸಂಸ್ಕರಣಾ ಘಟಕಗಳಿಗೆ ರವಾನಿಸಲು 300 ಕಾಂಪ್ಯಾಕ್ಟರ್‌ಗಳನ್ನು ಹೆಚ್ಚುವರಿಯಾಗಿ ಬೇಕಾಗುತ್ತವೆ. ಇವುಗಳಿಗೆ ತಿಂಗಳಿಗೆ ₹8.5 ಕೋಟಿಯಂತೆ (ಕಾಂಪ್ಯಾಕ್ಟರ್ ಒಂದಕ್ಕೆ ತಿಂಗಳಿಗೆ ₹ 2.86 ಲಕ್ಷ) ವರ್ಷಕ್ಕೆ ₹102.96 ಕೋಟಿ ತಗಲುತ್ತದೆ. ಇವುಗಳ ಸಂಸ್ಕರಣೆ ಮತ್ತು ಭೂಭರ್ತಿ ಶುಲ್ಕಗಳು ಸೇರಿದರೆ ತಿಂಗಳಿಗೆ ₹2.70 ಕೋಟಿಯಂತೆ ವರ್ಷಕ್ಕೆ ₹32.40 ಕೋಟಿ ವೆಚ್ಚವಾಗುತ್ತದೆ. ಭಾರಿ ಪ್ರಮಾಣದತ್ಯಾಜ್ಯ ಉತ್ಪಾದಕರಿಂದ ಪಡೆಯುವ ತ್ಯಾಜ್ಯ ನಿರ್ವಹಣೆಗೆ ಪಾಲಿಕೆ ವರ್ಷಕ್ಕೆ ಒಟ್ಟು ₹ 267.36 ಕೋಟಿ ಹೊರೆ ಹೊರಬೇಕಾಗುತ್ತದೆ’ ಎಂದು ಅವರು ವಿವರಿಸಿದರು.

## ‘ಒಣ ಕಸ ಸಂಗ್ರಹ: ವರ್ಷಕ್ಕೆ ಬೇಕು ₹ 154 ಕೋಟಿ’

‘ಒಂದು ವೇಳೆ ಒಣ ತ್ಯಾಜ್ಯ ಸಂಗ್ರಹವನ್ನೂ ಈಗಿನ ಟೆಂಡರ್ ಪ್ರಕ್ರಿಯೆಯಲ್ಲಿ ಸೇರ್ಪಡೆಗೊಳಿಸಿದರೆ 2,150 ಆಟೊಟಿಪ್ಪರ್‌ಗಳ ನಿರ್ವಹಣೆಗೆ ತಿಂಗಳಿಗೆ ₹ 11.82 ಕೋಟಿಯಂತೆ ವರ್ಷಕ್ಕೆ ₹ 141.90 ಕೋಟಿ ವೆಚ್ಚವಾಗುತ್ತದೆ’ ಎಂದು ಪಾಲಿಕೆ ಅಧಿಕಾರಿಯೊಬ್ಬರು ತಿಳಿಸಿದರು.

‘ಒಣ ಕಸ ಸಂಗ್ರಹಣ ಕೇಂದ್ರಗಳಲ್ಲಿ ನಿತ್ಯ 750 ಟನ್ ಕಸ ಸಂಗ್ರಹವಾಗುತ್ತದೆ ಎಂದು ಅಂದಾಜಿಸಲಾಗಿದೆ. ಇವುಗಳ ನಿರ್ವಹಣೆಗೆ ತಿಂಗಳಿಗೆ ₹ 1.01 ಕೋಟಿಯಂತೆ ವರ್ಷಕ್ಕೆ ₹ 12.15 ಕೋಟಿ ವೆಚ್ಚವಾಗಲಿದೆ. ಒಣ ಕಸ ವಿಲೇವಾರಿ ವ್ಯವಸ್ಥೆ ನಿರ್ವಹಣೆಗೆ ಪಾಲಿಕೆ ವರ್ಷಕ್ಕೆ ₹ 154 ಕೋಟಿ ವೆಚ್ಚ ಮಾಡಬೇಕಾಗುತ್ತದೆ’ ಎಂದು ವಿವರಿಸಿದರು.

‘ಪ್ರಸ್ತುತ 168 ವಾರ್ಡ್‌ಗಳಲ್ಲಿ ಒಣ ತ್ಯಾಜ್ಯ ಸಂಗ್ರಹಿಸುವ ಕೇಂದ್ರಗಳಿವೆ. 30 ಕಡೆ ಕಸ ಆಯುವವರೇ ಇಂತಹ ಕೇಂದ್ರಗಳನ್ನು ನಡೆಸುತ್ತಿದ್ದಾರೆ. ಅವುಗಳನ್ನು ಮೇಲ್ದರ್ಜೆಗೇರಿಸಲು ₹ 49.50 ಕೋಟಿ ವೆಚ್ಚವಾಗಲಿದೆ’ ಎಂದರು.

**ಹಸಿ ಕಸ, ಒಣ ಕಸ ಒಬ್ಬರೇ ಗುತ್ತಿಗೆದಾರರಿಗೆ ವಹಿಸುವುದು ಪಾಲಿಕೆ ಆರ್ಥಿಕ ಹೊರೆ ಹೆಚ್ಚಿಸಲಿದೆ. ಇವುಗಳ ನಿರ್ವಹಣೆಗೆ ಹೆಚ್ಚುವರಿ ಮೂಲಸೌಕರ್ಯ ಕಲ್ಪಿಸಬೇಕಾಗುತ್ತದೆ**

**ಎನ್.ಮಂಜುನಾಥ ಪ್ರಸಾದ್,**
ಪಾಲಿಕೆ ಆಯುಕ್ತ

### ಮುಖ್ಯಾಂಶಗಳು

- ₹650 ಕೋಟಿ ಸಗಟು ತ್ಯಾಜ್ಯ ವಿಲೇವಾರಿಗೆ ಸೌಕರ್ಯ ಕಲ್ಪಿಸಲು ತಗಲುವ ವೆಚ್ಚ
- ₹49.50 ಕೋಟಿ ಒಣ ಕಸ ಸಂಗ್ರಹ ಕೇಂದ್ರಗಳ ಸೌಕರ್ಯಕ್ಕೆ ಬೇಕಾದ ಮೊತ್ತ



ಪೊಲೀಸರಿಗೆ ಬ್ಯಾಗ್ ಹಾಗೂ ನೀರಿನ ಬಾಟಲಿಗಳನ್ನು ವಿತರಿಸಲಾಯಿತು. ಹಿಂದೆ ನಿಂತವರಲ್ಲಿ (ಎಡದಿಂದ) ಪ್ರಮೋದ್, ಪಿ.ಹರಿಶೇಖರನ್, ಪ್ರಣವ್ ಪ್ರಮೋದ್ ಹಾಗೂ ಪ್ರಭಾಕರ್ ಇದ್ದಾರೆ.

# ಕೂಡಿಟ್ಟ ಹಣದಿಂದ ಪೊಲೀಸರಿಗೆ ಕೊಡುಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಟಿಐಎಸ್‌ಬಿ ಶಾಲೆಯ ಪಿಯುಸಿ ವಿದ್ಯಾರ್ಥಿ ಪ್ರಣವ್ ಪ್ರಮೋದ್ ಸತತ ಮೂರು ವರ್ಷಗಳ ಕಾಲ ಕೂಡಿಟ್ಟ ಹಣದಲ್ಲಿ ನಗರದ ಸಂಚಾರ ಪೊಲೀಸರಿಗೆ ಬ್ಯಾಗ್ ಹಾಗೂ ಕುಡಿಯುವ ನೀರಿನ ಬಾಟಲಿಗಳನ್ನು ಕೊಡುಗೆ ನೀಡುವ ಮೂಲಕ ಗಮನ ಸೆಳೆದಿದ್ದಾನೆ.

ಪೊಲೀಸರು ನಗರದ ಸಂಚಾರ ದಟ್ಟಣೆ ನಿವಾರಣೆಗೆ ಶ್ರಮಿಸುತ್ತಿರುವುದನ್ನು ಕಂಡು ಸ್ಫೂರ್ತಿಗೊಂಡ ಪ್ರಣವ್, ತಾಯಿಯ ಸಲಹೆಯಂತೆ ಪೊಲೀಸ್ ಸಿಬ್ಬಂದಿಗೆ ಬ್ಯಾಗ್ ಹಾಗೂ ನೀರಿನ ಬಾಟಲಿಗಳನ್ನು ಕೊಡುಗೆಯಾಗಿ ನೀಡಿದ್ದಾನೆ.

ನಗರದ ಸಂಚಾರ ತರಬೇತಿ ಕೇಂದ್ರದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಬಾಲಕ ನೀಡಿದ 500 ಬ್ಯಾಗ್ ಹಾಗೂ ನೀರಿನ ಬಾಟಲಿಗಳನ್ನು ಹೆಚ್ಚುವರಿ ಪೊಲೀಸ್ ಆಯುಕ್ತ ಪಿ.ಹರಿಶೇಖರನ್ ಅವರು ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ ವಿತರಿಸಿದರು.

# ‘ನಾಣ್ಯಗಳು ಇತಿಹಾಸದ ಪ್ರತಿಬಿಂಬ’

ಪ್ರಜಾವಾಣಿ ವಾರ್ತೆ

**ಕೆಂಗೇರಿ:** ನಾಣ್ಯಗಳು ಪ್ರಾಚೀನ ಕಾಲದ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಯ ಪ್ರತೀಕ. ಇವುಗಳ ಅಧ್ಯಯನದಿಂದ ಇತಿಹಾಸದ ಸಮಗ್ರ ಚಿತ್ರಣ ಅರಿಯಲು ಸಾಧ್ಯವಾಗುತ್ತದೆ ಎಂದು ಬೆಂಗಳೂರು ವಿಶ್ವವಿದ್ಯಾಲಯ ಕುಲಸಚಿವ ಬಿ.ಕೆ.ರವಿ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಿಂದ ಆಯೋಜಿಸಲಾಗಿದ್ದ ಎಚ್.ಕೆ.ರಾಮರಾವ್ ಸಂಗ್ರಹದ ನಾಣ್ಯ ಹಾಗೂ ಅಂಚೆ ಚೀಟಿಗಳ 105ನೇ ಪ್ರದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಇತಿಹಾಸದ ಅಧ್ಯಯನದಲ್ಲಿ ನಾಣ್ಯಗಳು ಪ್ರಮುಖ ಪಾತ್ರ ವಹಿಸುತ್ತವೆ. ಇವುಗಳಿಂದ ಸಮಕಾಲೀನ ಜನರ ಆರ್ಥಿಕ ಪರಿಸ್ಥಿತಿ, ಜನ ಜೀವನ, ಆಚರಣೆ ಸೇರಿದಂತೆ ಇನ್ನಿತರ ಅಂಶಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ವಿಜಯನಗರದ ವೈಭವವನ್ನು ಆ ಕಾಲದ ಚಿನ್ನದ ನಾಣ್ಯಗಳೇ ಸಾರುತ್ತವೆ ಎಂದು ಹೇಳಿದರು.

ಮೌರ್ಯರು, ಗುಪ್ತರು, ಕುಶಾನರು, ರಾಷ್ಟ್ರಕೂಟ, ಚೋಳ, ಕೊಂಗು, ಚಾಲುಕ್ಯ, ಕದಂಬ, ಬಹುಮನಿ ಸುಲ್ತಾನರು, ವಿಜಯನಗರ ಸಾಮ್ರಾಟರು, ಮೈಸೂರು ಅರಸರು ಸೇರಿದಂತೆ ಕ್ರಿಸ್ತ ಪೂರ್ವ 300ರಿಂದ ಈಗಿನವರೆಗೂ ರಾಷ್ಟ್ರದಲ್ಲಿ ಚಲಾವಣೆಯಲ್ಲಿದ್ದ ಸುಮಾರು 1,600ಕ್ಕೂ ಹೆಚ್ಚು ನಾಣ್ಯಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

ನಾಣ್ಯವಾಗಿ ಬಳಕೆಯಾಗುತ್ತಿದ್ದ ಉಂಗುರಾಕಾರದ ಅಲಂಕಾರಿಕ ವಸ್ತುಗಳು, ಬೇಟೆಯಾಡುವುದರ ಜೊತೆಗೆ ನಾಣ್ಯವಾಗಿಯೂ ಉಪಯೋಗವಾಗುತ್ತಿದ್ದ ಚೂಪಾದ ಕಬ್ಬಿಣದ ತುಂಡುಗಳು, ಚಿನ್ನದಿಂದ ಮುದ್ರಿತವಾದ ನಾಣ್ಯಗಳು ಎಲ್ಲರ ಗಮನ ಸೆಳೆದವು. 132ಕ್ಕೂ ಹೆಚ್ಚು ವಿಶೇಷ ಅಂಚೆ ಚೀಟಿ ಸೇರಿದಂತೆ ಹೊರ ದೇಶಗಳ ಪುರಾತನ ಕಾಲದ ನೋಟುಗಳು ಪ್ರದರ್ಶನದಲ್ಲಿದ್ದವು.

ವಿಶ್ವ ವಿದ್ಯಾಲಯದಲ್ಲಿ ಮೊದಲ ಬಾರಿಗೆ ಈ ಕಾರ್ಯಕ್ರಮವನ್ನು ಆಯೋಜಿಲಾಗಿದ್ದು, ಅರುಣೋದಯ ಕಾಲೇಜು ಸೇರಿದಂತೆ ವಿವಿಧ ಕಾಲೇಜು ವಿದ್ಯಾರ್ಥಿಗಳು ವಸ್ತು ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು ಎಂದು ಇತಿಹಾಸ ವಿಭಾಗದ ಮುಖ್ಯಸ್ಥೆ ಪ್ರೊ. ನಾಗರತ್ನ ಹೇಳಿದರು.



ಎಚ್‌ಕೆ.ರಾಮರಾವ್ ಸಂಗ್ರಹದ ನಾಣ್ಯಗಳನ್ನು ಕುತೂಹಲದಿಂದ ವೀಕ್ಷಿಸುತ್ತಿರುವ ವಿದ್ಯಾರ್ಥಿಗಳು

### ಮುಖ್ಯಾಂಶಗಳು

- 1,600ಕ್ಕೂ ಹೆಚ್ಚು ನಾಣ್ಯಗಳು ಪ್ರದರ್ಶನಕ್ಕೆ ಇಡಲಾಗಿದೆ
- ವಿಶ್ವ ವಿದ್ಯಾಲಯದಲ್ಲಿ ಮೊದಲ ಬಾರಿಗೆ ಈ ಕಾರ್ಯಕ್ರಮ
- ಹೊರ ದೇಶಗಳ ಪುರಾತನ ಕಾಲದ ನೋಟುಗಳ ಪ್ರದರ್ಶನ

## ಪ್ರವೇಶಾತಿ ಆರಂಭ

**ಬೆಂಗಳೂರು:** ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ 2019ನೇ ಸಾಲಿನ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಿದೆ.

ಅರ್ಹ ವಿದ್ಯಾರ್ಥಿಗಳು www.ignou.ac.in ವಿಳಾಸದಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಜುಲೈ 31 ಅರ್ಜಿ ಸಲ್ಲಿಸಲು ಕೊನೆಯ ದಿನ. ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಜುಲೈ 15ರೊಳಗೆ ಅರ್ಜಿ ಸಲ್ಲಿಸಬೇಕು.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಕೆಗೆ ಯಾವುದೇ ಗೊಂದಲಗಳಿದ್ದಲ್ಲಿ ಬೆಂಗಳೂರಿನ ಪ್ರಾದೇಶಿಕ ಕಚೇರಿಗೆ ಬೆಳಿಗ್ಗೆ 10ರಿಂದ ಸಂಜೆ 5ಗಂಟೆಯವರೆಗೆ ಸಂಪರ್ಕಿಸಬಹುದು. ವಿವರಗಳಿಗಾಗಿ: 080–26654747 ಅಥವಾ www.ignourcblr.in

ರಾಜಕಾಲುವೆ ಒತ್ತುವರಿ ಆರೋಪ: ರೋಗ ಭೀತಿ

# ಬಡಾವಣೆಗಳಿಗೆ ಕೊಳಚೆ ನೀರು

ಪ್ರಜಾವಾಣಿ ವಾರ್ತೆ

**ನೆಲಮಂಗಲ:** ಮಳೆ ಬಂದಾಗಲೆಲ್ಲ ಕೊಳಚೆನೀರು ಮನೆಯ ಮುಂದೆಯೇ ಹರಿಯುತ್ತದೆ. ಕೆಲವೊಮ್ಮೆ ಮನೆಯೊಳಗೂ ನುಗ್ಗುತ್ತದೆ. ನೀರಿನ ಸಂಪುಗಳು ಕೊಳಚೆ ನೀರಿನಿಂದ ತುಂಬಿ ಶುದ್ಧ ನೀರಿಗಾಗಿ ಪರದಾಡಬೇಕಾಗುತ್ತದೆ.

ನೆಲಮಂಗಲ ನಗರಸಭೆಗೆ ಒಳಪಟ್ಟ ಕೆಐಬಿ ಎದುರಿನ ರಾಜಪ್ಪ ಬಡಾವಣೆಯ ಮನೆಗಳ ದುಸ್ಥಿತಿ ಇದು.

ಕೆಐಬಿ ಎದುರು ರಾಜಕಾಲುವೆ ಹಾದು ಹೋಗಿದೆ. ಪಟ್ಟಣದ ಚರಂಡಿ ನೀರನ್ನು ಅದಕ್ಕೆ ಬಿಡಲಾಗುತ್ತಿದೆ. ಇದರ ಮೂಲಕ ಬಿನ್ನಮಂಗಲ ಕೆರೆಗೆ ಕೊಳಚೆ ನೀರು ಹರಿಯುತ್ತದೆ. ನೆಲಮಂಗಲ ಕೆರೆಗೂ ಕೊಳಚೆ ನೀರು ಬಿಡಲಾಗುತ್ತಿದೆ.

‘ಒತ್ತುವರಿ ಮತ್ತು ಹೂಳಿನಿಂದಾಗಿ ರಾಜಕಾಲುವೆಗಳ ನೀರು ಹೊರಕ್ಕೆ ಬರುತ್ತಿದೆ. ಮಳೆಗಾಲದಲ್ಲಿ ಕೊಳಚೆ ನೀರು ಬಡಾವಣೆಗಳಿಗೆ ನುಗ್ಗುತ್ತದೆ’ ಎಂದು ಸ್ಥಳೀಯರಾದ ನಾಗರಾಜ್ ತಿಳಿಸಿದರು.

‘ಮನೆಗಳ ಮುಂದೆ ಮತ್ತು ಹಿಂದೆ ಕೊಳಚೆ ನೀರು ಸಂಗ್ರಹವಾಗುತ್ತದೆ. ನೀರು ಬುನಾದಿಗೆ ಇಂಗಿ ಕಟ್ಟಡಗಳು ಕುಸಿಯುವ ಭೀತಿಯಲ್ಲಿ ನಾವಿದ್ದೇವೆ’ ಎಂದು ಸ್ಥಳೀಯರಾದ ಷಣ್ಮುಖಪ್ಪ ಆತಂಕ ವ್ಯಕ್ತಪಡಿಸಿದರು.



ನೆಲಮಂಗಲದ ರಾಜಪ್ಪ ಬಡಾವಣೆಯ ನಿವೇಶನದಲ್ಲಿ ನಿಂತಿದ್ದ ಕೊಳಚೆನೀರು





Sobha Limited

A Global Real Estate Company
www.sobha.com

SOBHA
PASSION AT WORK

EXTRACT OF THE CONSOLIDATED FINANCIAL RESULTS FOR THE QUARTER AND YEAR ENDED 31 MARCH 2019

₹ In Million

| Particulars | Quarter ended on 31.03.2019 (Audited) | Quarter ended on 31.12.2018 (Unaudited) | Quarter ended on 31.03.2018 (Audited) | Year ended 31.03.2019 (Audited) | Previous year ended 31.03.2018 (Audited) |
|---|---|---|---|---|---|
| Total income from operations | 14,216 | 8,077 | 7,892 | 35,156 | 28,365 |
| Profit before tax | 1,756 | 1,096 | 907 | 4,483 | 3,170 |
| Profit after tax | 1,133 | 698 | 654 | 2,971 | 2,168 |
| Total comprehensive income for the period (comprising profit for the period (after tax) and other comprehensive income (after tax)) | 1,132 | 695 | 654 | 2,963 | 2,164 |
| Paid-up Equity Share Capital | 948 | 948 | 948 | 948 | 948 |
| Reserves (excluding revaluation reserve) | 21,343 | 20,212 | 26,751 | 21,343 | 26,751 |
| Net worth | 22,291 | 21,160 | 27,699 | 22,291 | 27,699 |
| Earnings per Share (of ₹ 10/- each) (for continuing and discontinued operations) | | | | | |
| Basic and diluted EPS | 11.95 | 7.36 | 6.90 | 31.33 | 22.67 |

Notes :

1) The key data of standalone financial results is as under:

| Particulars | Quarter ended on 31.03.2019 (Audited) | Quarter ended on 31.12.2018 (Unaudited) | Quarter ended on 31.03.2018 (Audited) | Year ended 31.03.2019 (Audited) | Previous year ended 31.03.2018 (Audited) |
|---|---|---|---|---|---|
| Income from operations | 14,369 | 7,915 | 7,388 | 34,338 | 26,496 |
| Profit before tax | 1,786 | 1,097 | 800 | 4,320 | 2,824 |
| Profit after tax | 1,150 | 711 | 599 | 2,866 | 1,939 |
| Total comprehensive income | 1,149 | 475 | 599 | 2,858 | 1,935 |

2) Key Standalone financial ratio of the Company is given below:

| Particulars | Quarter ended on 31.03.2019 (Audited) | Quarter ended on 31.12.2018 (Unaudited) | Quarter ended on 31.03.2018 (Audited) | Year ended 31.03.2019 (Audited) | Previous year ended 31.03.2018 (Audited) |
|---|---|---|---|---|---|
| Paid-up Debt Capital | 1,387 | 1,381 | 2,517 | 1,387 | 2,517 |
| Debt Equity Ratio | 1.22 | 1.19 | 0.86 | 1.22 | 0.86 |
| Capital Redemption Reserve | 119 | 119 | 105 | 119 | 105 |
| Debenture Redemption Reserve | 300 | 279 | 480 | 300 | 480 |
| Debt Service Coverage Ratio | 0.32 | 0.28 | 0.25 | 0.32 | 0.25 |
| Interest Service Coverage Ratio | 2.88 | 2.67 | 2.45 | 2.88 | 2.45 |

3) The above is an extract of the detailed consolidated financial results for the quarter and year ended 31 March 2019 filed with the Stock Exchanges under Regulation 33 and 52 of the SEBI (Listing Obligations and Disclosure Requirements) Regulations, 2015. The full format of the consolidated financial results are available on the website of the Stock Exchange(s) and the listed entity. ( www.bseindia.com, www.nseindia.com and www.sobha.com)

4) Ind AS 115 Revenue from contracts with customers has been notified by Ministry of Corporate Affairs (MCA) on 28 March 2018 and is effective from accounting period beginning on or after 1 April 2018, replaces existing revenue recognition standard. The application of Ind AS 115 has impacted the Group's accounting for recognition of revenue from real estate residential projects. There has been no significant impact on the contractual and manufacturing business of the Group.

The Group has applied the modified retrospective approach to its real estate residential contracts that were not completed as of 1 April 2018 and has given impact of adoption of Ind AS 115 by debiting retained earnings as at the said date by ₹ 7,570 million (net of tax). Accordingly, the comparatives have not been restated and hence, the current period figures are not comparable to the previous period figures. Due to the application of Ind AS 115 in the current period:

a) revenue from operations for the quarter is higher by ₹ 3,893 million and year ended 31 March 2019 is lower by ₹ 1,051 million respectively.

b) net profit after tax for the quarter ended 31 March 2019 and year ended 31 March 2019 is higher by ₹ 666 million and ₹ 460 million respectively.

c) basic and diluted EPS for the quarter and year ended 31 March 2019 is ₹ 11.95 and ₹ 31.33 instead of ₹ 4.92 and ₹ 26.48 per share.

for Sobha Limited

Bengaluru, India
May 17, 2019

J. C. Sharma
Vice Chairman and Managing Director

CIN: L45201KA1995PLC018475, Sobha Corporate Office: 'SOBHA' Sarjapur - Marathahalli Outer Ring Road (ORR), Devarabisanahalli, Bellandur Post, Bangalore - 560103 | Ph: +91-80-49320000 Fax: +91-80-49320444 Email: investors@sobha.com